ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 5, Mar-Apr, 2023, Pp. 8-16.**
**©*IIMRD*, Mysuru**

IIMRD JOURNALS

**www.iimrd.com**

# ಆರ್ಥಿಕ ಅಭಿವೃದ್ಧಿಯಲ್ಲಿ ಮಹಿಳಾ ಉದ್ಯಮಿಗಳ ಪಾತ್ರ

**ನಳಿನಿ. ಎ. ಕೆ* ಮತ್ತು ಡಾ. ಕೆ. ಎಂ. ಮಂಜುನಾಥ****

*ಸಂಶೋಧಕರು, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

**ಮಾರ್ಗದರ್ಶಕರು, ಉಪ ಪ್ರಾಂಶುಪಾಲರು, ವಾಣಿಜ್ಯಶಾಸ್ತ್ರ, ಎಂ.ಕಾಮ್. ನಿರ್ದೇಶಕರು, ಎಸ್. ಜೆ. ಆರ್. ಮಹಿಳಾ ಕಾಲೇಜು, ಬೆಂಗಳೂರು.

***ಸಾರಾಂಶ:(Abstract)***

*ಮಹಿಳೆಯರು ಮಾನವ ಬದುಕಿನ ಎಲ್ಲ ಕ್ಷೇತ್ರಗಳಲ್ಲಿಯೂ ತಮ್ಮ ಪ್ರತಿಭೆ ಮತ್ತು ಸಾಮರ್ಥ್ಯಗಳನ್ನು ಸಾಬೀತುಪಡಿಸಿದ್ದಾರೆ. ಆಧುನಿಕ ಸಮಾಜದಲ್ಲಿ ರಾಷ್ಟ್ರದ ಆರ್ಥಿಕತೆಯನ್ನು ಅಭಿವೃದ್ಧಿ ಪಡಿಸುವಲ್ಲಿ ಮಹಿಳಾ ಉದ್ಯಮಶೀಲತೆ ಅಭಿವೃದ್ಧಿ ನಿರ್ಣಾಯಕ ಪಾತ್ರವಹಿಸುತ್ತದೆ. ಮಹಿಳಾ ಉದ್ಯಮಿಗಳು ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಮೊದಲಾದ ಸಂಕೀರ್ಣತೆಗಳನ್ನು ಭಾರತದಲ್ಲಿ ಎದುರಿಸುತ್ತಿದ್ದಾರೆ. ನೂತನ ಸಹಸ್ರಮಾನದಲ್ಲಿ ಉದ್ಯಮಶೀಲತೆ ಅಭಿವೃದ್ಧಿಯಿಂದಲೇ ದೇಶದ ಆರ್ಥಿಕತೆ ಸುಧಾರಣೆಯಾಗುವುದೆಂಬ ಅರಿವು ಜನರಲ್ಲಿ ಮೂಡಿದೆ. ಮಹಿಳಾ ಉದ್ಯಮಶೀಲತೆಯು ಅಭಿವೃದ್ಧಿಶೀಲ ದೇಶಗಳಲ್ಲಿ ವಿಶಾಲವಾದ ಅನ್ವೇಷಿಸಿದ ಮೂಲದ ನಾವೀನ್ಯತೆ, ಕೆಲಸ ಸೃಷ್ಟಿ ಮತ್ತು ಆರ್ಥಿಕ ಬೆಳವಣಿಗೆಯನ್ನು ಪ್ರತಿನಿಧಿಸುತ್ತದೆ. ಮಹಿಳಾ ಉದ್ಯಮಿಗಳು ಆರ್ಥಿಕ ಸಂಪನ್ಮೂಲಗಳ ಲಭ್ಯತೆ, ಉದ್ಯಮಶೀಲತೆ ತರಬೇತಿ, ಉದ್ಯಮಶೀಲತೆ ಅಭಿವೃದ್ಧಿ ಜಾಲ ನಿರ್ಮಾಣ ಮತ್ತು ಉದ್ಯಮಶೀಲತೆ ಕೇಂದ್ರಿತ ಸರ್ಕಾರದ ನೆರವು ಮೊದಲಾದವುಗಳ ಕೊರತೆಯಿಂದ ಹಲವಾರು ಸಂಕೀರ್ಣತೆಗಳನ್ನು ಎದುರಿಸುತ್ತಿದ್ದಾರೆ.*

***ಮುಖ್ಯಪದಗಳು (Keywords)*** *ಉದ್ಯಮಶೀಲತೆ, ಮಹಿಳಾ ಉದ್ಯಮಿ, ಕೈಗಾರಿಕೋದ್ಯಮ, ಅಭಿವೃದ್ಧಿ.*

**ಪೀಠಿಕೆ**

ಉದ್ಯಮಶೀಲತೆ ಒಂದು ದೇಶದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಉದ್ಯಮಶೀಲತೆ ಹೆಚ್ಚುತ್ತಿರುವ ಸಂಪತ್ತನ್ನು ಸೃಷ್ಟಿಸುವ ಕ್ರಿಯಾತ್ಮಕ ಪ್ರಕ್ರಿಯೆಯಾಗಿದೆ. ಪ್ರಾಯೋಗಿಕವಾಗಿ, ಉದ್ಯಮಶೀಲತೆ ರಾಷ್ಟ್ರೀಯ ಆರ್ಥಿಕತೆಗಳು, ಕೈಗಾರಿಕೆಗಳು ಅಥವಾ ಮಾರುಕಟ್ಟೆಗಳ ಬೆಳವಣಿಗೆಯ ದಿಕ್ಕನ್ನು ಬದಲಾಯಿಸುತ್ತದೆ. ಆಧುನಿಕ ಕಾಲಘಟ್ಟದಲ್ಲಿ ದೇಶದ ಅಭಿವೃದ್ಧಿಗೆ ಹೊಸ ಚಾಲನೆ ನೀಡುವ ಸಲುವಾಗಿ ಮಹಿಳಾ ಉದ್ಯಮಶೀಲತೆಯನ್ನು ಅಭಿವೃದ್ಧಿಪಡಿಸುವುದು ಅನಿವಾರ್ಯವಾಗಿದೆ. ಸರ್ಕಾರವು ಮಹಿಳಾ ಉದ್ಯಮಶೀಲತೆಯನ್ನು ಜವಾಬ್ದಾರಿಯುತವಾಗಿ ಅಭಿವೃದ್ಧಿಪಡಿಸಿ ದೇಶದ ಆರ್ಥಿಕತೆಯನ್ನು ಗಣನೀಯವಾಗಿ

*Please cite this article as: ನಳಿನಿ. ಎ. ಕೆ. ಮತ್ತು ಡಾ. ಕೆ. ಎಂ. ಮಂಜುನಾಥ.* (2023). ಆರ್ಥಿಕ ಅಭಿವೃದ್ಧಿಯಲ್ಲಿ ಮಹಿಳಾ ಉದ್ಯಮಿಗಳ ಪಾತ್ರ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(5). ಪು.ಸಂ. 8–16.*

ಸುಧಾರಿಸಬೇಕು. ಮಹಿಳೆಯರ ಉದ್ಯಮಶೀಲತೆಯು ಕೌಟುಂಬಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಪೂರಕವಾಗಿದೆ. ಉದ್ಯಮಶೀಲತೆಯ ಲಕ್ಷಣಗಳು ಮತ್ತು ಕೌಶಲ್ಯಗಳೊಂದಿಗೆ ಮಹಿಳೆಯರ ಉದ್ಯಮಶೀಲತೆಯನ್ನು ವ್ಯವಸ್ಥಿತವಾಗಿ ರೂಪಿಸಬೇಕು.

ಮಹಿಳಾ ಉದ್ಯಮಿಗಳ ಪಾತ್ರ ಪ್ರಪಂಚದಲ್ಲಿ ಸಾಕಷ್ಟು ಬದಲಾಗಿದೆ. ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಮಹಿಳಾ ಉದ್ಯಮಿಗಳ ಸಹಭಾಗಿತ್ವ ಮತ್ತು ಕೊಡುಗೆ ಗಣನೀಯವಾಗಿ ಹೆಚ್ಚುತ್ತಿದೆ. ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ಉದ್ಯಮಶೀಲತೆ ಅಭಿವೃದ್ಧಿಪಡಿಸಿಕೊಂಡಾಗ ಆರ್ಥಿಕವಾಗಿ ಸುಧಾರಣೆ ಹೊಂದಬಹುದು. ವಿಶ್ವಸಂಸ್ಥೆ ಅಭಿವೃದ್ಧಿಶೀಲ ದೇಶಗಳಲ್ಲಿ ಮಹಿಳೆಯರ ಉದ್ಯಮಶೀಲತೆ ಅಭಿವೃದ್ಧಿಗಾಗಿ ಹಲವಾರು ಪ್ರಗತಿಶೀಲ ಕ್ರಮಗಳನ್ನು ಅನುಷ್ಠಾನಗೊಳಿಸಲು ಸಹಕಾರಿಯಾಗಿದೆ. ಆಧುನಿಕ ಸಮಾಜದಲ್ಲಿ ಔಪಚಾರಿಕ ಹಾಗೂ ಅನೌಪಚಾರಿಕ ಅಭಿವೃದ್ಧಿ ವಲಯಗಳನ್ನು ಕಾಣಬಹುದಾಗಿದೆ. ಕೈಗಾರಿಕೆಗಳು ಔಪಚಾರಿಕ ವಲಯಕ್ಕೆ ಬಂದರೆ ಕೃಷಿ, ಗುಡಿ ಕೈಗಾರಿಕೆ, ಕರಕುಶಲ ಕೈಗಾರಿಕೆ, ಗೃಹಕೃತ್ಯ ನಿರ್ವಹಣೆ ಮೊದಲಾದವುಗಳು ಅನೌಪಚಾರಿಕ ವಲಯಕ್ಕೆ ಸೇರುತ್ತವೆ.

ಭಾರತದಲ್ಲಿ ಮಹಿಳಾ ಉದ್ಯಮಿಗಳ ಅಭಿವೃದ್ಧಿಗಾಗಿ ಸರ್ಕಾರದ ವಿವಿಧ ಇಲಾಖೆಗಳು, ಬ್ಯಾಂಕುಗಳು, ಸಹಕಾರಿ ಸಂಸ್ಥೆಗಳು ಮೊದಲಾದವುಗಳು ಹಲವಾರು ರೀತಿಯಲ್ಲಿ ಸಹಕರಿಸುತ್ತಿವೆ. ಮಹಿಳಾ ಉದ್ಯಮಿಗಳ ಉದ್ಯಮಶೀಲತೆ ಮತ್ತು ಮಹಿಳಾ ಉದ್ಯೋಗಿಗಳ ವೃತ್ತಿ ಕೌಶಲ್ಯ ಮೊದಲಾದವುಗಳನ್ನು ಅಭಿವೃದ್ಧಿಪಡಿಸಿ ಮಹಿಳೆಯರನ್ನು ರಾಷ್ಟ್ರೀಯ ಅಭಿವೃದ್ಧಿ ಮುಖ್ಯವಾಹಿನಿಯಲ್ಲಿ ತೊಡಗಿಸುವ ಪ್ರಯತ್ನಗಳು ಹೆಚ್ಚುತ್ತಿವೆ. ಮಹಿಳಾ ಉದ್ಯಮಿಗಳು ಆರ್ಥಿಕವಾಗಿ ಅಭಿವೃದ್ಧಿ ಹೊಂದುವುದರಿಂದ ಅವರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳು ಸಹಜವಾಗಿ ಸುಧಾರಿಸುತ್ತವೆ. ಮಹಿಳೆಯರ ಸಾಮಾನ್ಯ ಅಭಿವೃದ್ಧಿ ಮತ್ತು ಮಹಿಳಾ ಉದ್ಯಮಿಗಳ ವಿಶೇಷ ಅಭಿವೃದ್ಧಿಯಿಂದ ದೇಶವು ಅಭಿವೃದ್ಧಿ ಪಥದಲ್ಲಿ ಮುನ್ನಡೆಯಬಹುದು.

ಗ್ರಾಮೀಣ ಮಹಿಳೆಯರು ತಮ್ಮ ಬದುಕನ್ನು ಗೃಹ ನಿರ್ವಹಣೆ ಮತ್ತು ಅನೌಪಚಾರಿಕ ಕಸುಬುಗಳ ನಿರ್ವಹಣೆಯಲ್ಲಿ ತೊಡಗಿಸಿಕೊಂಡು ಆರ್ಥಿಕವಾಗಿ ಹಿಂದುಳಿದಿದ್ದಾರೆ. ನಗರ ಪ್ರದೇಶದ ಸುಶಿಕ್ಷಿತ ಮಹಿಳೆಯರು ಔಪಚಾರಿಕ ವಲಯದಲ್ಲಿ ಸೇವೆ ಸಲ್ಲಿಸಿ ನ್ಯಾಯೋಚಿತ ವೇತನ ಪಡೆಯುತ್ತಾರೆ. ಉಳಿದವರು ಉದ್ಯಮಶೀಲತೆ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಕೈಗಾರಿಕೆ ಮತ್ತು ವಾಣಿಜ್ಯ ಕಾರ್ಯ ಚಟುವಟಿಕೆಗಳ ಮೂಲಕ ಆರ್ಥಿಕವಾಗಿ ಲಾಭ ಗಳಿಸುತ್ತಾರೆ.

**ಹೊಸ ಆರ್ಥಿಕ ನೀತಿ ಮತ್ತು ಮಹಿಳಾ ಉದ್ಯಮಿಗಳು**

೧೯೯೧ರಲ್ಲಿ ಜಾರಿಗೊಂಡ ಹೊಸ ಆರ್ಥಿಕ ನೀತಿ ನಮ್ಮ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಜೀವನದ ಮೇಲೆ ಅಗಾಧವಾದ ಪ್ರಭಾವ ಬೀರುತ್ತಿದೆ. ಆರ್ಥಿಕ ಕ್ಷೇತ್ರದಲ್ಲಿ ಹೆಚ್ಚು ಪರಿಣಾಮಕ್ಕೊಳಗಾದ ವಲಯಗಳೆಂದರೆ ಕೈಗಾರಿಕೋದ್ಯಮ ಹಾಗೂ ಸಮೂಹ ಮಾಧ್ಯಮ, ಕೈಗಾರಿಕೋದ್ಯಮದ ಮೇಲಾದ ಪರಿಣಾಮಗಳಿಂದ ಮಹಿಳಾ ಉದ್ಯಮಿಗಳು ಹೊರತಾಗಿಲ್ಲ. ಹೊಸ ಆರ್ಥಿಕ ನೀತಿಯಲ್ಲಿ ಅಳವಡಿಸಿ ಕೊಳ್ಳಲಾದ ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣ ತತ್ವಗಳು ಆರ್ಥಿಕ ತಜ್ಞರ ಅಭಿಪ್ರಾಯದಂತೆ ಮಹಿಳಾ ಉದ್ಯಮಿಗಳ ಮೇಲೆ ಸಕಾರಾತ್ಮಕ ಪರಿಣಾಮ ಬೀರಿದೆ ಎಂಬುದಾದರೆ ಸ್ತ್ರೀವಾದಿ ತಜ್ಞರ ದೃಷ್ಟಿಕೋನದಿಂದ ನಕಾರಾತ್ಮಕ ಪರಿಣಾಮ ಕಂಡುಬರುತ್ತಿದೆ ಎಂಬುದಾಗಿದೆ. ಮಾರುಕಟ್ಟೆ

ವಿಸ್ತಾರಗೊಂಡು ತೀವ್ರ ಸ್ಪರ್ಧೆಯಿಂದ ವಸ್ತುಗಳ ಗುಣಮಟ್ಟ ಹೆಚ್ಚಾಗಿ, ಬೇಡಿಕೆ ಹೆಚ್ಚಾಗಿ ಮಹಿಳಾ ಉದ್ಯಮಿಗಳು ಲಾಭ ಗಳಿಸಲು ಅವಕಾಶವಾಗಿದೆ. ಬಹು ರಾಷ್ಟ್ರೀಯ ಕಂಪನಿಗಳೊಂದಿಗೆ ಸಂಯೋಜನೆಗೊಂಡು ಬಂಡವಾಳ, ನವೀನ ತಂತ್ರಜ್ಞಾನ, ಹೊಸ ಮಾರುಕಟ್ಟೆ ಸೃಷ್ಟಿಗೆ ಅವಕಾಶವಾಗಿದೆ.

ಮಹಿಳೆಯರ ಸೃಜನಶೀಲತೆ, ನವೀನ ಕಲ್ಪನೆಗೆ, ಪ್ರತಿಭೆಗಳ ಹೊರ ಹೊಮ್ಮುವಿಕೆಗೆ ವಾತಾವರಣ ಸೃಷ್ಟಿಯಾಗಿದೆ ಎಂದೆಲ್ಲಾ ಹೇಳಲಾಗುತ್ತಿದೆ. ಇವೆಲ್ಲ ಸ್ವಲ್ಪ ಮಟ್ಟಿಗೆ ನಿಜವಾದರೂ ಎಷ್ಟು ಪ್ರಮಾಣ ಹಾಗೂ ಯಾವ ವರ್ಗದ ಮಹಿಳಾ ಉದ್ಯಮಿಗಳು ಈ ಲಾಭವನ್ನು ಪಡೆಯುತ್ತಿದ್ದಾರೆ ಎಂದು ತಿಳಿಯುವುದು ಮುಖ್ಯ. ಸೂಕ್ಷ್ಮ ಮಟ್ಟದಲ್ಲಿ ಸಣ್ಣ ಸಣ್ಣ ಉದ್ಯಮಗಳಲ್ಲಿ ತೊಡಗಿರುವ ಮಹಿಳೆಯರ ಪರಿಸ್ಥಿತಿ ಏನಾಗಿದೆ. ಅವರು ಯಾವ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂದು ನೋಡುವುದು ಅವಶ್ಯಕ. ಮಹಿಳಾ ಉದ್ಯಮಿಗಳು ಇಂದು ಬಹುರಾಷ್ಟ್ರೀಯ ಕಂಪೆನಿಗಳೊಂದಿಗೆ ಸ್ಪರ್ಧಿಸಬೇಕಾಗಿದೆ. ವಿದೇಶಿ ಕಂಪನಿಗಳು ನವೀನ ತಂತ್ರಜ್ಞಾನದಿಂದ ಕಡಿಮೆ ಖರ್ಚಿನಲ್ಲಿ ಉತ್ತಮ ಗುಣಮಟ್ಟದ ವಸ್ತುಗಳನ್ನು ಉತ್ಪಾದಿಸಿ ಕಡಿಮೆ ಬೆಲೆಗೆ ಮಾರುತ್ತವೆ. ಆದರೆ ಮಹಿಳಾ ಉದ್ಯಮಿಗಳು ಸ್ಥಳೀಯ ಕಚ್ಚಾ ಸಾಮಗ್ರಿ ತಂತ್ರಜ್ಞಾನದಿಂದ, ದೈಹಿಕ ಶ್ರಮ ಬಳಸಿ ಉತ್ಪಾದಿಸುವ ವಸ್ತುಗಳಲ್ಲಿ ಗುಣವನ್ನು ಹೆಚ್ಚಿಸುವುದಕ್ಕಾಗಲಿ ಕಡಿಮೆ ಖರ್ಚಿನಲ್ಲಿ ಉತ್ಪಾದಿಸಲು ಆಗದೆ ಬೆಲೆಯನ್ನು ಮೇಲ್ಮಟ್ಟದಲ್ಲಿ ಇಡಬೇಕಾಗುತ್ತದೆ. ಕಳೆದ ಒಂದೂವರೆ ದಶಕದಲ್ಲಿ ಹಲವಾರು ಸಣ್ಣ ಉದ್ಯಮಗಳು ಮುಚ್ಚಿ ಹೋಗಿರುವುದು ಕಂಡು ಬಂದಿದೆ. ಇದರಿಂದ ಉದ್ಯಮಿಗಳಾಗಿ, ಕೆಲಸಗಾರರಾಗಿ ಹೆಚ್ಚು ತೊಂದರೆಗೊಳಗಾದವರು ಮಹಿಳೆಯರೆಂದು ತಿಳಿದುಬಂದಿದೆ.

ಭಾರತದಲ್ಲಿ ಸರಕಾರದ ವಿವಿಧ ಕಾರ್ಯಕ್ರಮಗಳ ಮೂಲಕ ಮಹಿಳೆಯರಲ್ಲಿ ಉದ್ಯಮಶೀಲತೆಯನ್ನು ಬೆಳೆಸಲು ಬ್ಯಾಂಕುಗಳು ಅತೀ ಮುಖ್ಯವಾದ ಪಾತ್ರವಹಿಸುತ್ತಿವೆ. ಮಹಿಳೆಯರ ರಾಷ್ಟ್ರೀಯ ನೀತಿಯ ಪ್ರಕಾರ ಮಹಿಳಾ ಅಭಿವೃದ್ಧಿ ನಿಗಮಗಳನ್ನು ಸ್ಥಾಪಿಸಲಾಗಿದೆ. ಮಹಿಳಾ ಸಮೃದ್ಧಿ ಯೋಜನೆ ಮತ್ತು ರಾಷ್ಟ್ರೀಯ ಮಹಿಳಾ ಕೋಶ್ ಮುಂತಾದ ಯೋಜನೆಗಳನ್ನು ಪರಿಚಯಿಸಿ ಕೆಲವು ಸಂಘಟನೆಗಳನ್ನು ಸ್ಥಾಪಿಸಲಾಗಿದೆ. ೧೯೮೮ರಲ್ಲಿ ಭಾರತೀಯ ಮಹಿಳಾ ಉದ್ಯಮಿಗಳ ಫೆಡರೇಶನ್ ಸ್ಥಾಪಿಸುವುದರ ಮೂಲಕ ಯಶಸ್ವಿ ಉದ್ಯಮಿಗಳಾಗಲು ಆರ್ಥಿಕ ಸಬಲೀಕರಣವನ್ನು ಹೊಂದಬೇಕು ಎನ್ನುವ ದೃಷ್ಟಿಯಿಂದ ಈ ಫೆಡರೇಶನ್ ನೀತಿ ನಿರೂಪಕರ ಜೊತೆಗೆ ಸಂಪರ್ಕಿಸಿ ಮಹಿಳೆಯರಿ ನೆರವಾಗಲು ತರಬೇತಿ ಮತ್ತು ಬ್ಯಾಂಕುಗಳಿಂದ ಹಣಕಾಸಿನ ನೆರವು ದೊರಕಿಸಿಕೊಡುತ್ತಿದೆ. ಸ್ಥಾಪನೆಯಾದಂದಿನಿಂದ ಇಲ್ಲಿಯವರಗು ಉತ್ತಮ ಕೆಲಸ ಮಾಡುತ್ತಿದೆ.

ಆಧುನಿಕ ವಿಜ್ಞಾನ ತಂತ್ರಜ್ಞಾನದಿಂದ ನಿರ್ಮಿತವಾದ ನೂತನ ಆರ್ಥಿಕ, ಸಾಮಾಜಿಕ ವ್ಯವಸ್ಥೆ ಮತ್ತು ಹೊಸ ವಿಚಾರಗಳು ಹೊಸ ಮಹಿಳಾ ಉದ್ಯಮಿಗಳಿಗೆ ಹೆಚ್ಚಿನ ಪ್ರೇರಣೆ ನೀಡಿದೆ ಅವರ ಪ್ರೋತ್ಸಾಹಕ್ಕಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಹೊಸ ಕ್ರಮಗಳನ್ನು ಶೋಧಿಸುತ್ತವೆ. ಸರ್ಕಾರೇತರ ಸಂಘಟನೆಗಳು ಮಹಿಳಾ ಉದ್ಯಮಿಗಳಲ್ಲಿ ಉದ್ಯಮ ಸಾಹಸದ ಚೈತನ್ಯ ತುಂಬುವ ಪ್ರಕ್ರಿಯೆಯಲ್ಲಿ ನಿರತವಾಗಿವೆ. ಮಹಿಳೆಯರು ಇಂಥಹ ತಂತ್ರಜ್ಞಾನವನ್ನು ಬಳಸಿಕೊಂಡು ಹಲವಾರು ಮಹಿಳೆಯರಿಗೆ ಪ್ರೇರಕವಾಗುವುದರಿಂದ ದೇಶದ ಎಲ್ಲಾ ಮಹಿಳೆಯರು ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ.

ಮಹಿಳೆಯರ ವಿಷಯದಲ್ಲಿ ಸಬಲೀಕರಣ ಮತ್ತು ಉದ್ಯಮಶೀಲತೆಯು ಒಂದಕ್ಕೊಂದು ಪೂರಕವಾಗಿವೆ. ಯಶಸ್ವಿ ಉದ್ಯಮಶೀಲತೆಯು ಸಬಲೀಕರಣಕ್ಕೆ ದಾರಿ ಮಾಡಿಕೊಟ್ಟರೆ, ಸಬಲೀಕರಣವು ಉದ್ಯಮಿಗಳನ್ನು ತಮ್ಮ ಗುರಿ ತಲುಪಲು ಸ್ಫೂರ್ತಿ ನೀಡುತ್ತದೆ. ನಿರುದ್ಯೋಗಿಗಳಿಗೆ ನೇರವಾಗಿ ಭತ್ಯೆ ನೀಡುವ ಬದಲು ಅವರಿಗೆ ಕೌಶಲ್ಯ ಆಧಾರಿತ ತರಬೇತಿ ನೀಡುವುದು. ಮಹಿಳೆಯರಲ್ಲಿ ಉದ್ಯಮಶೀಲತೆ ಗುಣಗಳನ್ನು ಬೆಳೆಸುವುದು ಮಹಿಳಾ ಸಬಲೀಕರಣದ ದಿಕ್ಕಿನಲ್ಲಿ ಮಹತ್ವವಾದದ್ದು ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ, ಆರ್ಥಿಕ ಅಭಿವೃದ್ಧಿಗೆ ಮಹಿಳಾ ಉದ್ಯಮಿಗಳ ಅಭಿವೃದ್ಧಿ ಅತೀ ಅಗತ್ಯವಾಗಿದೆ. ಸಶಕ್ತರಾಗಲು ಗ್ರಾಮೀಣ ಮಹಿಳೆಯರಿಗೆ ಬೆಂಬಲ, ಸಮಾಲೋಚನೆ ಮತ್ತು ತರಬೇತಿಯ ಅಗತ್ಯವಿದೆ. ಈ ನಿಟ್ಟಿನಲ್ಲಿ ಸರ್ಕಾರದ ಜೊತೆಗೆ ಹಲವಾರು ಸರಕಾರೇತರ ಸಂಘ ಸಂಸ್ಥೆಗಳು ಮಹಿಳೆಯರನ್ನು ಆರ್ಥಿಕವಾಗಿ ಸದೃಢರನ್ನಾಗಿಸಲು ಶ್ರಮಿಸಬೇಕಿವೆ.

**ಕೈಗಾರಿಕಾ ನೀತಿ ೨೦೨೦–೨೦೨೫**

ಜಾಗತಿಕಾ ಉತ್ಪಾದನಾ ಕೇಂದ್ರವಾಗಿ ಕರ್ನಾಟಕ ಸ್ಥಾನವನ್ನು ಉಳಿಸಿಕೊಳ್ಳಲು ಮತ್ತು ಬಂಡವಾಳ ಒಳಸೇರಿಸುವ ತಂತ್ರಜ್ಞಾನ ವರ್ಗಾವಣೆ ಮೂಲಕ ಉನ್ನತ ಮತ್ತು ಸುಸ್ಥಿರ ಕೈಗಾರಿಕಾ ಬೆಳವಣಿಗೆಯನ್ನು ಸಾಧಿಸಲು ವಿಶ್ವದರ್ಜೆಯ ಕೈಗಾರಿಕಾ ಮೂಲಸೌಕರ್ಯ ಕಾಶಲ್ಯವನ್ನು ಉನ್ನತೀಕರಿಸಲು ಮತ್ತು ನೀತಿಗಳು ಮತ್ತು ಅಭ್ಯಾಸಗಳನ್ನು ಅತ್ಯುತ್ತಮ ಜಾಗತಿಕ ಮಾನದಂಡಗೊಳಿಸುವುದಾಗಿದೆ. ಕೈಗಾರಿಕಾ ನೀತಿಯ ಕೆಲವು ಉದ್ದೇಶಗಳು ಈ ಕೆಳಗಿನಂತಿವೆ:

- ರೂ.೫ ಲಕ್ಷ ಕೋಟಿ ಮೌಲ್ಯದ ಹೂಡಿಕೆಗಳನ್ನು ಆಕರ್ಷಿಸುವುದು.
- ೨೦ ಲಕ್ಷ ಜನರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು.
- ಮುಂದಿನ ಐದು ವರ್ಷಗಳಲ್ಲಿ ಸರಕು ರಫ್ತಿನಲ್ಲಿ ಮೂರನೇ ಸ್ಥಾನವನ್ನು ತರುವುದು.
- ಕೈಗಾರಕಾ ಬೆಳವಣಿಗೆ ದರವನ್ನು ವಾರ್ಷಿಕ ಶೇ. ೧೦ರಷ್ಟು ಕಾಯ್ದುಕೊಳ್ಳವುದು.
- ತಂತ್ರಜ್ಞಾನ ಅಳವಡಿಕೆ ಮತ್ತು ನಾವಿನ್ಯತೆಗೆ ಸಕ್ರಿಯ ಪರಿಸರ ವ್ಯವಸ್ಥೆಯನ್ನು ಒದಗಿಸುವುದು.

**ಕೈಗಾರಿಕಾ ನೀತಿಯ ತಂತ್ರಗಳು**

- ಸುಸ್ಥಿರ, ಸಮತೋಲನ ಮತ್ತು ಅಂತರ್ಗತ ಕೈಗಾರಿಕಾ ಬೆಳವಣಿಗೆಯನ್ನು ಉತ್ತೇಜಿಸುವುದು.
- ಉದ್ಯೋಗ ಸೃಷ್ಟಿಗೆ ಅನುವು ಮಾಡುವುದು ಮತ್ತು ಕಾರ್ಮಿಕ ಮಾರುಕಟ್ಟೆಯ ನಮ್ಯತೆ, ನಿಯಂತ್ರಣ ಕಾರ್ಮಿಕ ಸುಧಾರಣೆಗಳನ್ನು ಹೆಚ್ಚಿಸುವುದು.
- ಕರ್ನಾಟಕವು ಜ್ಞಾನ ಮತ್ತು ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರವಾಗಿ ಹೊರಹೊಮ್ಮಲು ತಾಂತ್ರಿಕ ಸಹಭಾಗಿತ್ವ ರಚಿಸುವುದು.
- ಸೂಕ್ಷ್ಮ, ಸಣ್ಣ ಮತ್ತು ಮಾಧ್ಯಮ ವಲಯದ ಉದ್ಯಮಗಳಿಗೆ ಅಭಿವೃದ್ಧಿ ಮತ್ತು ಉತ್ತೇಜನದ ಮೇಲೆ ಗಮನ ಕೇಂದ್ರೀಕರಿಸುವುದು.

- ಕೈಗಾರಿಕಾ ಭೂಮಿ ಲಭ್ಯತೆಗೆ ಅನುಕೂಲ ಮಾಡುವುದು.
- ರಾಜ್ಯದ ಆರ್ಥಿಕ ಬೆಳವಣಿಗೆ ಯಂತ್ರದ ಎರಡನೇ ಮತ್ತು ಮೂರನೇ ಶ್ರೇಣಿಯ ಆಂತರಿಕ ನಗರಗಳು. ಭಾರತದ ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಕರ್ನಾಟಕವನ್ನು ಮುಂಚೂಣಿಯಲ್ಲಿ ಇರಿಸುವುದು. ಕರ್ನಾಟಕವನ್ನು "ಭವಿಷ್ಯದ ಕಾರ್ಖಾನೆ" ಉದ್ಯಮ ೪.೦ ಯಾಗಿ ಪ್ರದರ್ಶಿಸಿಸುವುದು.
- ವಲಯದ ನಿರ್ದಿಷ್ಟ ಕೌಶಲ್ಯ ಅಭಿವೃದ್ಧಿ ಕಾರ್ಯತಂತ್ರವನ್ನು ಅಭಿವೃದ್ಧಿಪಡಿಸಲು ವಿವಿಧ ಮಧ್ಯಸ್ಥಗಾರರೊಂದಿಗೆ ತೊಡಗಿಸಿಕೊಳ್ಳುವುದು.
- ಸಮಗ್ರ ಬಹು ವಲಯ ಕೈಗಾರಿಕಾ ಉದ್ಯಾನವನಗಳು ಮತ್ತು ಸಮಾಂತರ ಕಾರ್ಖಾನೆಗಳ ಅಭಿವೃದ್ಧಿಯಲ್ಲಿ ಖಾಸಗಿ ಹೂಡಿಕೆಯನ್ನು ಆಕರ್ಷಿಸುವುದು.
- ರಾಜ್ಯದಲ್ಲಿ ವ್ಯಾಪಾರ ಮಾಡುವ ಪ್ರಕರಣವನ್ನು ಹೆಚ್ಚಿಸಲು ವಾತಾವರಣವನ್ನು ಸೃಷ್ಟಿಸುವುದು.
- ಸಂಶೋಧನೆ ಮತ್ತು ಅಭಿವೃದ್ಧಿ ಮತ್ತು ತಂತ್ರಜ್ಞಾನ ಶ್ರೇಣಿಯನ್ನು ಹೆಚ್ಚಿಸಿ ಬೆಂಬಲಿಸುವುದು.

**ಗ್ರಾಮೀಣ ಪ್ರದೇಶದಲ್ಲಿನ ಮಹಿಳೆಯರಿಗೆ ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆಯ ಅವಕಾಶಗಳು**

ನಮ್ಮ ಸಮಾಜದ ಸಂಪ್ರದಾಯ ಬದ್ಧವಾದ, ಸಾಮಾಜಿಕ ಸ್ಥಿತಿ ಮತ್ತು ವಾತಾವರಣದಲ್ಲಿ ಮಹಿಳೆಯರು ತಮ್ಮ ಸ್ವಂತ ಉದ್ದಿಮೆಗಳನ್ನು ನಡೆಸುವುದು. ಇತ್ತೀಚಿನ ಬೆಳವಣಿಗೆಯೇ ಸಾಮಾಜಿಕ ಮತ್ತು ಆರ್ಥಿಕ ಅನಿವಾರ್ಯತೆಗಳಿಂದಾಗಿ, ಮಹಿಳೆಯರು ದುಡಿಯುವ ಮತ್ತು ತಮ್ಮ ಕಾಲ ಮೇಲೆ ತಾವು ನಿಲ್ಲಬೇಕೆಂಬ ಇಚ್ಛೆಗನುಗುಣವಾಗಿ ಸ್ವತಂತ್ರವಾಗಿ ಒಂದು ಉದ್ಯೋಗವನ್ನು ಅಥವಾ ಉದ್ದಿಮೆಯನ್ನು ಮಾಡಲೇ ಬೇಕಾದಂತಹ ಪರಿಸ್ಥಿತಿಯು ಬಂದಿದೆ. ಇದರಿಂದಾಗಿ ಗ್ರಾಮೀಣ ಪ್ರದೇಶದಲ್ಲಿನ ಮಹಿಳಾ ಉದ್ಯಮಶೀಲರ ಸಂಖ್ಯೆ ಅಪಾರವಾಗಿ ಬೆಳೆಯುತ್ತದೆ.

ನೆಹರೂರವರು 'ಮಹಿಳೆಯು ಆರ್ಥಿಕವಾಗಿ ಮುಂದೆ ಬಂದರೆ ಕುಟುಂಬವು ಮುಂದೆ ಬರುತ್ತದೆ, ಕುಟುಂಬದ ಜೊತೆಗೆ ಅಲ್ಲಿನ ಸಮಾಜವು ಮುಂದೆ ಬರುತ್ತದೆ' ಎಂದಿದ್ದಾರೆ. ಮಹಿಳೆಯರಿಗೆ ದುಡಿಯುವ ಮತ್ತು ಸಂಪಾದಿಸುವ ಅವಕಾಶಗಳು ಸಿಕ್ಕವು ಎಂದರೆ ಅವರು ಆರ್ಥಿಕವಾಗಿ ಮುಂದೆ ಬಂದು ಒಂದು ಉತ್ತಮ ಜೀವನವನ್ನು ನಡೆಸುತ್ತಾರೆ. ಮಹಿಳೆಯರು ಆರ್ಥಿಕ ಮತ್ತು ಆರ್ಥಿಕವಲ್ಲದ ಕಾರಣಗಳಿಗಾಗಿ, ಉದ್ಯಮಶೀಲತೆಯನ್ನು ಸ್ಥಾಪಿಸುತ್ತಾರೆ.

ದೇಶದ ಆರ್ಥಿಕ ಅಭಿವೃದ್ಧಿಗೆ ಗ್ರಾಮೀಣ ಮಹಿಳೆಯರ ಭಾಗವಹಿಸುವಿಕೆ ಗಮನಾರ್ಹವಾಗಿದೆ. ಇದಕ್ಕಾಗಿ, ಗ್ರಾಮೀಣ ಮಹಿಳೆಯರಿಗೆ ಉತ್ತಮ ಜೀವನೋಪಾಯದ ಅವಕಾಶಗಳನ್ನು ಸೃಷ್ಟಿಸಲು ಸಾಮರ್ಥ್ಯ ವರ್ಧನೆ ಮತ್ತು ಕೌಶಲ್ಯಗಳ ಅಭಿವೃದ್ಧಿಯು ನಿರ್ಣಾಯಕವಾಗಿದೆ. ಭಾರತದಲ್ಲಿ (೨೦೨೨)ರ ಪ್ರಕಾರ ಹೂಡಿಕೆ ಮಾಡಿ ಲಭ್ಯವಿರುವ ಆಯ್ಕೆಗಳ ನಡುವಿನ ಅಂತರವನ್ನು ಕಡಿಮೆ ಮಾಡಲು ಪರಿಣಾಮಕಾರಿ ಜಾಗೃತಿ ಮೂಡಿಸುವ ಅಭಿಯಾನಗಳು ಪೂರ್ವಾಪೇಕ್ಷಿತವಾಗಿವೆ. ವೃತ್ತಿಪರ ಶಿಕ್ಷಣ ಮತ್ತು ಕೌಶಲ್ಯ

ತರಬೇತಿಗಾಗಿ. ಗ್ರಾಮೀಣ ಮಹಿಳೆಯರನ್ನು ಪ್ರೋತ್ಸಾಹಿಸಲು ಜಾಗೃತಿ ಅಭಿಯಾನಗಳು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ದಂತಹ ಸಾಂಪ್ರದಾಯಿಕವಲ್ಲದ ವೃತ್ತಿಗಳನ್ನು ಆಯ್ಕೆ ಮಾಡಲಾಯಿತು.

ಹಲವಾರು ಅಂತರ–ಸಚಿವಾಲಯದ ಉಪಕ್ರಮಗಳಲ್ಲಿ ಭಾರತ ಸರ್ಕಾರವು ಮಹಿಳಾ ರೈತರನ್ನು ಅವರ ಜೀವನೋಪಾಯಕ್ಕಾಗಿ ಸಾಮಾಜಿಕ ಮತ್ತು ಆರ್ಥಿಕ ಲಾಭಗಳನ್ನು ಹೆಚ್ಚಿಸಲು ಉತ್ತೇಜಿಸುವತ್ತ ಗಮನ ಹರಿಸಿದೆ. ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ ಮತ್ತು ಗ್ರಾಮೀಣಾಭಿವೃದ್ಧಿ ಸಚಿವಾಲಯವು ವಿವಿಧ ಯೋಜನೆಗಳ ಮೂಲಕ ಗ್ರಾಮೀಣ ಮಹಿಳಾ ರೈತರ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುತ್ತಿದೆ. ಮಹಿಳಾ ಕಿಸಾನ್ ಸಶಕ್ತಿಕರಣ್ ಪರಿಯೋಜನಾ (ಎಮ್.ಕೆ.ಎಸ್.ಪಿ) ಗ್ರಾಮೀಣ ಮಹಿಳಾ ರೈತರಿಗೆ ಕೌಶಲ್ಯ ನೀಡುವ ಪ್ರಮುಖ ಉಪಕ್ರಮಗಳಲ್ಲಿ ಒಂದಾಗಿದೆ. ಈ ಯೋಜನೆಯನ್ನು ಗ್ರಾಮೀಣಾಭಿವೃದ್ಧಿ ಸಚಿವಾಲಯವು ದೀನದಯಾಳ್ ಅಂತ್ಯೋದಯ ಯೋಜನೆ (ಡೆ–ಎನ್ಆರ್ಎಲ್ಎಮ್), ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್‌ನ ಉಪ ಘಟಕವಾಗಿ ಪರಿಚಯಿಸಿದೆ. ಇದನ್ನು ಭಾರತದಾದ್ಯಂತ ರಾಜ್ಯ ಗ್ರಾಮೀಣ ಜೀವನೋಪಾಯ ಮಿಷನ್ (ಎಸ್ಆರ್ಎಲ್ಎಮ್)ನ ಮೂಲಕ ಜಾರಿಗೊಳಿಸಲಾಗಿದೆ. ಗ್ರಾಮೀಣಾಭಿವೃದ್ಧಿ ಸಚಿವಾಲಯವು ದೀನದಯಾಳ್ ಅಂತ್ಯೋದಯ ಯೋಜನೆಯಡಿ, ಇತ್ತೀಚಿನ ಕೃಷಿ ತಂತ್ರಗಳ ಬಳಕೆ, ಕೃಷಿ–ಪರಿಸರ ಉತ್ತಮ ಅಭ್ಯಾಸಗಳು ಇತ್ಯಾದಿಗಳ ತರಬೇತಿಗಳನ್ನು ಸಮುದಾಯ ಸಂಪನ್ಮೂಲ ವ್ಯಕ್ತಿಗಳು ಮತ್ತು ವಿಸ್ತರಣಾ ಏಜೆನ್ಸಿಗಳ ಮೂಲಕ ಮಹಿಳಾ ರೈತರಿಗೆ ನೀಡಲಾಗುತ್ತಿದೆ.

ಗ್ರಾಮೀಣಾಭಿವೃದ್ಧಿ ಸಚಿವಾಲಯವು ದೀನದಯಾಳ್ ಅಂತ್ಯೋದಯ ಯೋಜನೆಯ ಅಡಿಯಲ್ಲಿ, ರಾಜ್ಯ ಮಟ್ಟದ ಸಂಪನ್ಮೂಲ ವ್ಯಕ್ತಿಗಳಿಗೆ ಸುಮಾರು ೫೮,೯೬೫ ಕೃಷಿ ಸಖಿ ಯೋಜನೆಯಡಿ ೭೩೫ ತರಬೇತಿಯನ್ನು ನೀಡಿದ್ದಾರೆ. ರಾಷ್ಟ್ರೀಯ ತರಬೇತಿ ಸಂಸ್ಥೆಗಳು, ರಾಜ್ಯ ಕೃಷಿ ನಿರ್ವಹಣೆ ಮತ್ತು ವಿಸ್ತರಣಾ ತರಬೇತಿ (ಎಸ್.ಎ.ಎಮ್.ಇ.ಟಿ.ಐ.ಎಸ್), ಕೃಷಿ ವಿಜ್ಞಾನ ಕೇಂದ್ರಗಳು (ಕೆ.ವಿ.ಕೆ.ಎಸ್.) ಮತ್ತು ರಾಜ್ಯ ಕೃಷಿ ವಿಶ್ವವಿದ್ಯಾಲಯಗಳು (ಎಸ್.ಎ.ಯು.ಎಸ್) ಮೂಲಕ ಕೃಷಿ ಮತ್ತು ಸಂಬಂಧಿತ ಪ್ರದೇಶಗಳಲ್ಲಿ (ಕನಿಷ್ಠ ೨೦೦ ಗಂಟೆಗಳ ಅವಧಿಯ) ಕೌಶಲ್ಯ ತರಬೇತಿ ಕೋರ್ಸ್‌ಗಳನ್ನು ಮಹಿಳಾ ರೈತರಿಗೆ ನಡೆಸಲಾಗುತ್ತದೆ, ದೇಶದಾದ್ಯಂತ ಇವುಗಳ ಹೊರತಾಗಿ, ಅಡುಗೆ ತೋಟಗಾರಿಕೆ ಮತ್ತು ಪೌಷ್ಟಿಕ ತೋಟಗಾರಿಕೆ ಮೂಲಕ ಮನೆಯ ಆಹಾರ ಭದ್ರತೆಯಂತಹ ವಿಷಯಗಳ ಕುರಿತು ಮಹಿಳಾ ರೈತರಿಗೆ ನಿರ್ದಿಷ್ಟ ತರಬೇತಿ ಕಾರ್ಯಕ್ರಮಗಳು ಅಂದರೆ ಕಡಿಮೆ ಅಥವ ಕನಿಷ್ಠ ವೆಚ್ಚದ ಆಹಾರದ ವಿನ್ಯಾಸ ಮತ್ತು ಅಭಿವೃದ್ಧಿ, ಹೆಚ್ಚಿನ ಪೋಷಕಾಂಶಗಳ ದಕ್ಷತೆಯ ಆಹಾರಕ್ಕಾಗಿ ವಿನ್ಯಾಸ ಮತ್ತು ಅಭಿವೃದ್ಧಿ, ಸಂಸ್ಕರಣೆಯಲ್ಲಿ ಪೋಷಕಾಂಶಗಳ ನಷ್ಟವನ್ನು ಕಡಿಮೆಗೊಳಿಸುವುದು, ಸಂಸ್ಕರಣೆ ಮತ್ತು ಅಡುಗೆ, ಗ್ರಾಮೀಣ ಕರಕುಶಲ ಇತ್ಯಾದಿಗಳನ್ನು ವಿಸ್ತರಣಾ ಸಂಸ್ಥೆಗಳ ಮೂಲಕ ಆಯೋಜಿಸಲಾಗಿದೆ.

ಗ್ರಾಮೀಣ ಪ್ರದೇಶದ ಮಹಿಳೆಯರು ಅಭಿವೃದ್ಧಿಯಾಗಲು ಮಹಿಳಾ ಸ್ವ–ಸಹಾಯ ಗುಂಪುಗಳು ಮತ್ತು ರೈತ ಉತ್ಪಾದಕ ಸಂಸ್ಥೆ (ಎಫ್.ಪಿ.ಒ) ಮಹಿಳಾ ಆಧಾರಿತ ಕಾರ್ಯಕ್ರಮಗಳ ಕುರಿತು ಅರಿವು ತಲುಪಿಸಲು ಜಾರಿಗೊಳಿಸಲಾಯಿತು. ಅವುಗಳಾದ ಪ್ರಧಾನ ಮಂತ್ರಿ ಕೌಶಲ್ಯ ವಿಕಾಸ್ ಯೋಜನೆಯು ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯವು ಗ್ರಾಮೀಣ ಯುವಕರು ಮತ್ತು ಮಹಿಳೆಯರಿಗೆ ತಮ್ಮ ಜೀವನೋಪಾಯಕ್ಕಾಗಿ ಹಲವಾರು ಅಲ್ಪಾವಧಿಯ ಕೌಶಲ್ಯ ತರಬೇತಿ ಕಾರ್ಯಕ್ರಮಗಳನ್ನು ಒದಗಿಸುತ್ತದೆ.

ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಗಳ ಕಾರ್ಯಕ್ರಮದ ಅಡಿಯಲ್ಲಿ ಒಟ್ಟು ತರಬೇತಿ ಪಡೆದ ಅಭ್ಯರ್ಥಿಗಳಲ್ಲಿ ಶೇ.೬೬% ಮಹಿಳೆಯರು ಆಗಿರಬೇಕು. ಆರ್.ಎಸ್.ಇ.ಟಿ.ಐ ಮನೆಯಲ್ಲಿ ತಯಾರಿಸಿದ ಅಗರಬತ್ತಿ, ಮೃದು ಆಟಿಕೆಗಳು, ಪಾಪಡ್, ಉಪ್ಪಿನಕಾಯಿ, ಮಸಾಲಾ ಪುಡಿ, ಬ್ಯೂಟಿ ಪಾರ್ಲರ್ ನಿರ್ವಹಣೆ ಮತ್ತು ವಸ್ತ್ರಾಭರಣಗಳ ತಯಾರಿಕೆಯಲ್ಲಿ ಹಲವಾರು ಕೌಶಲ್ಯ ತರಬೇತಿಗಳನ್ನು ನೀಡುತ್ತದೆ. ಆರ್.ಎಸ್.ಇ.ಟಿ.ಐ ಯೋಜನೆಯಡಿಯಲ್ಲಿ, ಒಟ್ಟು ೬೪ರಲ್ಲಿ ೧೦ ತರಬೇತಿ ಕೋರ್ಸ್‌ಗಳು ಪ್ರತ್ಯೇಕವಾಗಿವೆ. ಮಹಿಳಾ ಅಭ್ಯರ್ಥಿಗಳು ಆಗಿರಬೇಕು. ಈ ಕಾರ್ಯಕ್ರಮವು ಪ್ರಾರಂಭದಿಂದಲೂ ಸುಮಾರು ೨೬.೨೮ ಲಕ್ಷ ಮಹಿಳಾ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ.

ಹಲವಾರು ಯೋಜನೆಗಳನ್ನು ಭಾರತ ಸರ್ಕಾರವು ಗ್ರಾಮೀಣ ಮಹಿಳೆಯರಿಗೆ ಉದ್ಯಮಶೀಲತೆಯ ಅವಕಾಶಗಳನ್ನು ಸೃಷ್ಟಿಸುವ ಗುರಿಯನ್ನು ಹೊಂದಿದೆ. ದೀನದಯಾಳ್ ಅಂತ್ಯೋದಯ ಅಡಿಯಲ್ಲಿ ಜಾರಿಗೆ ತರಲಾದ ಸ್ಟಾರ್ಟ್–ಅಪ್ ವಿಲೇಜ್ ಎಂಟರ್‌ಪ್ರೆನ್ಯೂರ್‌ಶಿಪ್ ಪ್ರೋಗ್ರಾಂ (ಎಸ್.ವಿ.ಇ.ಪಿ) ಮತ್ತು ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ (ಡೆ–ಎನ್‌ಆರ್‌ಎಲ್‌ಎಮ್) ೨೦೧೬ರಿಂದ ಉಪ ಯೋಜನೆಯಾಗಿ ಜಾರಿಗೊಳಿಸಲಾಗಿದೆ. ಈ ಯೋಜನೆಯು ಗ್ರಾಮೀಣ ಬಡವರನ್ನು ಬೆಂಬಲಿಸುವ ಉದ್ದೇಶದಿಂದ ಉದ್ಯಮಗಳನ್ನು ರಚಿಸಲು ಸ್ವಯಂ ಉದ್ಯೋಗ ಅವಕಾಶಗಳು, ಹಣಕಾಸಿನ ನೆರವು ಮತ್ತು ತರಬೇತಿಯನ್ನು ಒದಗಿಸುತ್ತದೆ.

ಎಸ್.ವಿ.ಇ.ಪಿ. ಅಡಿಯಲ್ಲಿ, ಸುಮಾರು ೭೫ ಪ್ರತಿಶತದಷ್ಟು ಉದ್ಯಮಗಳು ಮಹಿಳೆಯರ ಒಡೆತನದಲ್ಲಿವೆ ಮತ್ತು ನಿರ್ವಹಿಸಲ್ಪಡುತ್ತವೆ. ಅಲ್ಲದೆ, ದೀನ್‌ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ (ಡಿಡಿಯು–ಜಿಕೆವೈ) ಎಂದು ಗ್ರಾಮೀಣ ಯುವಕರಿಗೆ ರಾಷ್ಟ್ರವ್ಯಾಪಿ ಉದ್ಯೋಗ–ಸಂಯೋಜಿತ ಕೌಶಲ್ಯ ತರಬೇತಿ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು ಅಭಿವೃದ್ಧಿಪಡಿಸಿದ ಮಹಿಳಾ ಶಕ್ತಿ ಕೇಂದ್ರ (ಎಮ್‌ಎಸ್‌ಕೆ) ಸಮುದಾಯದ ಭಾಗವಹಿಸುವಿಕೆ ಮತ್ತು ಹೆಣ್ಣು ಶಿಕ್ಷಣ, ತಾಯಿಯ ಆರೈಕೆ, ಆರೋಗ್ಯ ಇತ್ಯಾದಿಗಳ ಬಗ್ಗೆ ಜಾಗೃತಿ ಮೂಡಿಸುವ ಮೂಲಕ ಗ್ರಾಮೀಣ ಮಹಿಳೆಯರನ್ನು ಸಬಲೀಕರಣಗೊಳಿಸಿದೆ.

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯು ರಾಜ್ಯದಲ್ಲಿ ಕೌಶಲ್ಯಾಭಿವೃದ್ಧಿಯಲ್ಲಿ ಶ್ರೇಷ್ಟತೆ ಮತ್ತು ಅಂತರ್‌ರಾಷ್ಟ್ರೀಯ ಗುಣಮಟ್ಟವನ್ನು ಸಾಧಿಸಲು ಪ್ರೋತ್ಸಾಹದಾಯಕವಾಗಿದೆ. ಈ ಯೋಜನೆಯು ೧೮ ರಿಂದ ೩೫ ವರ್ಷ ವಯೋ ಗುಂಪಿನ ಯುವಜನತೆಗೆ ಕೌಶಲ್ಯೀಕರಣಕ್ಕಾಗಿ ಒತ್ತು ನೀಡುವುದು ಮತ್ತು ಸಮಾನತೆ ಹಾಗೂ ನಿಷ್ಪಕ್ಷತೆಯನ್ನು ಖಾತರಿಪಡಿಸುವುದು. ೨೦೧೭ ಮತ್ತು ೨೦೩೦ರ ನಡುವೆ ಸುಮಾರು ೧೮೮ ಲಕ್ಷ ಯುವಜನತೆಯ ಕೌಶಲ್ಯೀಕರಣದ ಗುರಿಯನ್ನು ತಲುಪುತ್ತದೆ. ಈ ಇಲಾಖೆಯಡಿ ಈ ಚಟುವಟಿಕೆಗಳನ್ನು ಕೈಗೊಳ್ಳುವ ಸಂಸ್ಥೆಗಳನ್ನು ಕೋಷ್ಟಕ–೧ರಲ್ಲಿ ತಿಳಿಸಲಾಗಿದೆ.

**ಕೋಷ್ಟಕ ೧**

**ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಅಡಿ ಬರುವ ಸಂಸ್ಥೆಗಳು**

| ಕ್ರ.ಸಂ. | ಸಂಸ್ಥೆಗಳ ಹೆಸರುಗಳು |
|---|---|
| ೧. | ಉದ್ಯಮಶೀಲತಾ ಅಭಿವೃದ್ಧಿ ಮತ್ತು ಇನ್‌ಕ್ಯೂಬೇಷನ್ ಕೇಂದ್ರಗಳು |
| ೨. | ಕೈಗಾರಿಕಾ ತರಬೇತಿ ಕೇಂದ್ರಗಳು ಮತ್ತು ಕೌಶಲ್ಯಾಭಿವೃದ್ಧಿ ಕೇಂದ್ರಗಳು |
| ೩. | ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರ |
| ೪. | ಕೈಗಾರಿಕಾ ತರಬೇತಿ ಕೇಂದ್ರಗಳು ಮತ್ತು ಕೌಶಲ್ಯಾಭಿವೃದ್ಧಿ ಕೇಂದ್ರಗಳು |
| ೫. | ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಆಯುಕ್ತಾಲಯ |
| ೬. | ಗ್ರಾಮೀಣಾಭಿವೃದ್ಧಿ ಮತ್ತು ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ |
| ೭. | ಕರ್ನಾಟಕ ಉದ್ಯಮಶೀಲತಾ ಅಭಿವೃದ್ಧಿ ಕೇಂದ್ರ |
| ೮. | ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ |
| ೯. | ಸಂಜೀವಿನಿ |
| ೧೦. | ಕರ್ನಾಟಕ ಜರ್ಮನ್ ಬಹುಕೌಶಲ್ಯ ಅಭಿವೃದ್ಧಿ ನಿಗಮ, ಸರ್.ಎಂ ವಿಶ್ವೇಶ್ವರಯ್ಯ ರಾಷ್ಟ್ರೀಯ ನಿರ್ಮಾಣ ಅಕಾಡೆಮಿ, ಎಲ್ಲಾ ಸಂಘಗಳಿಗೆ ಕೌಶಲ್ಯಕ್ಕಾಗಿ ಭಾರತರತ್ನ ಮೋಕ್ಷಗುಂಡಂ ವಿಶ್ವೇಶ್ವರಯ್ಯ ರಾಷ್ಟ್ರೀಯ ತರಬೇತಿ ಸೌಲಭ್ಯ |
| ೧೧. | ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ |
| ೧೨. | ರಾಷ್ಟ್ರೀಯ ನಗರ ಜೀವನೋಪಾಯ ಮಿಷನ್ |
| ೧೩. | ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯಾಭಿವೃದ್ಧಿ ನಿಗಮ |

**ಮೂಲ:** ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಆರ್ಥಿಕ ಸಮೀಕ್ಷೆ, ಕರ್ನಾಟಕ ಸರ್ಕಾರ, ಬೆಂಗಳೂರು, ೨೦೧೮–೧೯. ಪು.ಸಂ..೭೯೨.

**ಉಪಸಂಹಾರ**

ನೂತನ ಸಹಸ್ರಮಾನದಲ್ಲಿ ಉದ್ಯಮಶೀಲತೆ ಅಭಿವೃದ್ಧಿ ರಾಷ್ಟ್ರೀಯ ಅಭಿವೃದ್ಧಿ ಪ್ರಕ್ರಿಯೆಯ ಅವಿಭಾಜ್ಯ ಅಂಗವಾಗಿದೆ. ಮಹಿಳೆಯರ ಸಬಲೀಕರಣವಾಗದ ಹೊರತು ದೇಶದ ಸಮಗ್ರ ಅಭಿವೃದ್ಧಿ ಸಾಧ್ಯವಿಲ್ಲವೆಂಬ ಅರಿವು ಎಲ್ಲರಲ್ಲಿ ಮೂಡಿದೆ. ಭಾರತದ ಸಂವಿಧಾನ ಮಹಿಳೆಯರ ರಕ್ಷಣೆ ಮತ್ತು ಸಬಲೀಕರಣಗಳಿಗಾಗಿ ಹಲವಾರು ರಚನಾತ್ಮಕ ವಿಧಿ–ವಿಧಾನಗಳನ್ನು ಒಳಗೊಂಡಿದೆ. ಮಹಿಳೆಯರ ಉದ್ಯಮಶೀಲತಾ ಅಭಿವೃದ್ಧಿ ಮಹಿಳಾ ಸಬಲೀಕರಣದ ಪ್ರಮುಖ ಭಾಗವಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಹಿಳೆಯರ ಸಬಲೀಕರಣ ಮತ್ತು ಉದ್ಯಮಶೀಲತೆ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸಿವೆ. ಮಹಿಳೆಯರು ಉದ್ಯಮಶೀಲತೆ ಅಭಿವೃದ್ಧಿ ದೃಷ್ಟಿಯಿಂದ ಪುರುಷರಿಗಿಂತ ಹಿಂದುಳಿದಿರಲು ಸಾಮಾಜಿಕ

ವ್ಯವಸ್ಥೆ, ರಾಜಕೀಯ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ ಮೊದಲಾದ ಅಂಶಗಳು ಪ್ರಮುಖ ಕಾರಣಗಳಾಗಿವೆ. ಕರ್ನಾಟಕ ರಾಜ್ಯದಲ್ಲಿ ಮಹಿಳಾ ಉದ್ಯಮಿಗಳ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ ಹಲವಾರು ಪ್ರಗತಿಶೀಲ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ. ಬ್ಯಾಂಕುಗಳು, ಸಹಕಾರಿ ಸಂಸ್ಥೆಗಳು, ಪಂಚಾಯತ್‌ರಾಜ್ ಸಂಸ್ಥೆಗಳು, ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳು, ಸ್ವ–ಸಹಾಯ ಸಂಸ್ಥೆಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳು ಮಹಿಳಾ ಉದ್ಯಮಿಗಳ ಅಭಿವೃದ್ಧಿಗಾಗಿ ಒಟ್ಟಾಗಿ ಶ್ರಮಿಸುತ್ತಿವೆ. ಮಹಿಳಾ ಉದ್ಯಮಿಗಳ ಸ್ಥಾನಮಾನ, ಸಮಸ್ಯೆಗಳು, ಸವಾಲುಗಳು ಮತ್ತು ಅವಕಾಶಗಳನ್ನು ಕೇಂದ್ರೀಕರಿಸಿದ ಪ್ರಸ್ತುತ ಅಧ್ಯಯನ ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ವಿಶೇಷ ಮಹತ್ವ ಹೊಂದಿದೆ.

**ಪರಾಮರ್ಶನ ಗ್ರಂಥಗಳು**


- ಹೇಮಲತಾ. ಎಚ್. ಎಂ. (೨೦೦೬). ಮಹಿಳಾ ಅಧ್ಯಯನ. ೩. ಮಹಿಳೆ ಮತ್ತು ದುಡಿಮೆ ಮಹಿಳಾಭಿವೃದ್ಧಿ ಕಾರ್ಯನೀತಿ ಯೋಜನೆಗಳು, ಡಿ. ವಿ. ಕೆ. ಮೂರ್ತಿ ಪ್ರಕಾಶನ, ಮೈಸೂರು.
- "ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ". (೨೦೨೨), ರಾಷ್ಟ್ರೀಯ ಸೂಚನಾ ವಿಜ್ಞಾನ ಕೇಂದ್ರ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನದ ಅಚಿವಾಲಯ, ಭಾರತ ಸರ್ಕಾರ, ಬೆಂಗಳೂರು.
- ಭಾಸ್ಕರ್. ಖ. (೨೦೧೯). ಮೈಸೂರು ಜಿಲ್ಲೆಯ ಮಹಿಳಾ ಉದ್ಯಮಿಗಳ ಆರ್ಥಿಕ ಸಬಲೀಕರಣ: ಒಂದು ಅಧ್ಯಯನ, ಮಹಿಳಾ ಅಧ್ಯಯನ ಕೇಂದ್ರ ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿ, ಮೈಸೂರು.
- ನೀಲಂ ಪಟೇಲ್. (೨೦೨೨). ಎಂಪೌರಿಂಗ್ ರೂರಲ್ ವಿಮೆನ್, ಕುರುಕ್ಷೇತ್ರ ಆ ಜರ್ನಲ್ ಆನ್ ರೂರಲ್ ಡೆವೆಲಪೋಮೆಂಟ್, ನ್ಯೂ ಡೆಲ್ಲಿ.
- ಮಿನಿಸ್ಟರಿ ಆಫ್ ಸ್ಟ್ಯಾಟಿಸ್ಟಿಕ್ಸ್ ಆಂಡ್ ಪ್ರೋಗ್ರಾಮ್ ಇಂಪ್ಲಿಮೆಂಟೇಷನ್. (೨೦೧೭). ಪಾರ್ಟಿಸಿಪೇಷನ್ ಇನ್ ಎಕಾನಮಿ. pdf (mospi.nic.in).